<u>**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**</u>

<u>**SC No**.10/2020</u>

**PW**. 8

**CW**. 14

**ಸಾಕ್ಷಿಯ ಹೆಸರು –ಮಹೇಶ ಎಂ ಎ**

**ತಂದೆಯ ಹೆಸರು –ಅಶ್ವಥ ಕುಮಾರ**

**ವಯಸ್ಸು –28 ವರ್ಷಗಳು** ದಿನಾಂಕ <u>04-02-2026</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯಾಪಾರ**

**ವಾಸಸ್ಥಳ –ಮನುಗನಹಳ್ಳಿ, ಹುಣಸೂರು**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ಚಾಸಾ–12, 13 ಮತ್ತು 15 ಮತ್ತು ಆರೋಪಿತರು ಗೊತ್ತು. ದಿಃ 13–07–2015 ರಂದು ರಾತ್ರಿ 12.00 ಗಂಟೆ ಸುಮಾರಿಗೆ ಆರೋಪಿತರು ಸುಮಾರು 30–35 ವರ್ಷ ಅಪರಿಚಿತ ವ್ಯಕ್ತಿಗೆ ರಿಪೀಸ್ ಪಟ್ಟಿಯಿಂದ ತಲೆಗೆ ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ. ಆ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(<u>**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**</u>)

<u>**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**</u>

ದಿಃ 13–07–2015 ರಂದು ರಾತ್ರಿ 12.00 ಗಂಟೆ ಸುಮಾರಿಗೆ ಒಬ್ಬ ಅಪರಿಚಿತ ವ್ಯಕ್ತಿಯು 1 ನೇ ಆರೋಪಿಯ ಮನೆಯ ಬಾಗಿಲು ತಟ್ಟಿದಾಗ ಆತ ಕಳ್ಳತನ ಮಾಡಲು ಬಂದಿದ್ದಾನೆಂದು

ಅನುಮಾನಗೊಂಡು 1 ಮತ್ತು 2 ನೇ ಆರೋಪಿತರು ಸದರಿ ಅಪರಿಚಿತ ವ್ಯಕ್ತಿಗೆ ರಿಪೀಸ್ ಪಟ್ಟಿಯಿಂದ ತಲೆಗೆ ಹಾಗೂ ಮೈಕೈಗೆ ಹಲ್ಲೆ ಮಾಡಿ, ಆತ ನಿದ್ರಾನಗೊಂಡಾಗ ಯಾರಿಗೂ ತಿಳಿಯದಂತೆ ಗಾಯಾಳನ್ನು 100 ಮೀಟರ್ ದೂರದ ಮನುಗನಹಳ್ಳಿ ಗ್ರಾಮದ ಗೇಟ್ ಬಳಿ ಇರುವ ಗಣಪತಿ ದೇವಸ್ಥಾನದ ಬಳಿ ಇರುವ ಅರಳಿಮರದ ಬುಡದಲ್ಲಿ ಇಟ್ಟುಹೋದರು ಎಂದರೆ ಸರಿಯಲ್ಲ. ಆರೋಪಿತರು ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದರಿಂದ ಸದರಿ ಅಪರಿಚಿತ ವ್ಯಕ್ತಿ ಮರಣ ಹೊಂದಿದ್ದಾನೆಂದು ನನಗೆ ಮರುದಿನ ಬೆಳಗ್ಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಿಪಿ-2 ಫೋಟೋದಲ್ಲಿರುವ ವ್ಯಕ್ತಿಯನ್ನು ನಾನು ನೋಡಿಲ್ಲ. ಈ ಪ್ರಕರಣದ ಬಗ್ಗೆ ಎಲ್ಲ ಮಾಹಿತಿ ಇದ್ದು ಈಗ ನನಗೆ ಓದಿ ಹೇಳಿದಂತೆ ನಿಪಿ-10 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ-**

ಏನೂ ಇಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.